# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 66-2021

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಡಾ. ವಾಣಿ | ಫ್ರಾಸಾಃ | 14 |
| **ಗಂಡನ ಹೆಸರುಃ** | ಪ್ರಶಾಂತ್ | ಚಾಸಾಃ | 18 |
| **ವಯಸ್ಸುಃ** | 46 | ಪ್ರಮಾಣ ವಚನ ಭೋದಿಸಿದ ದಿನಾಂಕ: | 13-08-2025 |
| **ಉದ್ಯೋಗಃ** | ವೈದ್ಯಾಧಿಕಾರಿ | | |
| **ವಾಸ ಸ್ಥಳಃ** | ಶಿಡ್ಲಘಟ್ಟ | | |

### ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

*20.03.20213* ರಂದು ನಾನು ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆ ಕರ್ತವ್ಯದಲ್ಲಿದ್ದಾಗ ಈ ಪ್ರಕರಣದಲ್ಲಿ ತನಿಖಾಧಿಯವರು ಮೃತ ಹಮ್‌ಜದ್ ನವಾಜ್ ನ ಮರಣೋತ್ತರ ಪರೀಕ್ಷೆ ಮಾಡಿ ವರದಿ ನೀಡುವಂತೆ ಕೋರಿಕೊಂಡ ಹಿನ್ನಲೆಯಲ್ಲಿ ಆಸ್ಪತ್ರೆಯ ಶವಗಾರದಲ್ಲಿದ್ದ ಮೃತ ಶರೀರವನ್ನು ಗಮನಿಸಲಾಗಿ ಸದರಿ ದೇಹ ಪುರುಷನ ಶವವಾಗಿದ್ದು *175* ಸೆಂ.ಮೀ. ಉದ್ದವಿದ್ದು, ಮೃತ ದೇಹದ ಮೇಲೆ ಬಿಳಿ ಶರ್ಟ್ , ಬನಿಯನ್ , ಕಪ್ಪು ಪ್ಯಾಂಟ್ ಹಾಗೂ ಒಳ ಉಡುಪುಗಳು ಕಂಡು ಬಂದಿದ್ದು ರಕ್ತ ಸಿಕ್ತವಾಗಿತ್ತು. ದೇಹದ ಮೈ ಮೇಲೆ *1)* ಬಲ ತಲೆಯ ಮೇಲೆ *13X1.5* ಕೊಚ್ಚಿದ್ದ ಗಾಯ ಕಂಡುಬಂದಿದ್ದು , ಬುರುಡೆಯ ಮೂಳೆ ಮುರಿತವಾಗಿತ್ತು. *2)* ಎಡ ತಲೆಯ ಮೇಲೆ ಆಳವಾದ ಹರಿದ ಗಾಯ *5X1X1 cm 3)* ಎಡ ತಲೆಯ ಮೇಲೆ ಆಳವಾದ ಹರಿದ ಗಾಯ

*5X1.5X2.5 cm, 4)* ಎಡ ಬಾಯಿಯ ಬಳಿ ಕೊಚ್ಚಿದ್ದ ಗಾಯ *9X2X3 cm* ದವಡೆಯ ಮೂಳೆ ಹಾಗೂ ಹಲ್ಲು ಮುರಿತ ಉಂಟಾಗಿತ್ತು. *5)* ಎಡ ಕಿವಿಯಿಂದ ಬಲ ಕಿವಿಯ ವರೆಗೆ ಕೊಚ್ಚಿದ್ದ ಗಾಯ ಕಂಡು ಬಂದಿದ್ದು ಮಾಂಸ ಖಂಡಗಳು , ನರ ಹಾಗೂ ಸಿ-*7*-ಸಿ-*8* ಕುತ್ತಿಗೆಯ ಮೂಳೆ ಮುರಿತವಾಗಿದ್ದು ಗಾಯ *30X6X3 cm*ದ *6)* ಎಡ ತುಟಿಯ ಬಳಿ *5X1X1* ಅಳತೆಯ ಕೊಚ್ಚಿದ್ದ ಗಾಯ, *7)* ಕುತ್ತಿಗೆಯ ಕಳಭಾಗದಲ್ಲಿ ಚುಚ್ಚಿದ ಗಾಯ *06X3X5, 8)* ಎಡ ತೋಳಿನ ಮೇಲೆ *16X4X3* ಕೊಚ್ಚಿದ್ದ ಗಾಯ , *9)* ಬಲ ತೋಳಿನ ಮೇಲೆ *5X2X1* ಕೊಚ್ಚಿದ್ದ ಗಾಯ , *10)* ಮಂಡಿಗಳ ಮೇಲೆ ತರಚು ಗಾಯ , ಹೆಬ್ಬೆರಳಿನ ಮೇಲೆ ತರಚು ಗಾಯಗಳು ಕಂಡು ಬಂದಿದ್ದು ಎಲ್ಲಾ ಗಾಯಗಳು ಮರಣ ಪೂರ್ವ ಗಾಯಗಳಾಗಿದ್ದು, ಈ ಬಗ್ಗೆ ನಾನು ನೀಡಿದ ಗಾಯದ ಪ್ರಮಾಣ ಪತ್ರ ನಿಪಿ-*57* ಆಗಿರುತ್ತದೆ. ನಿಪಿ-*57(*ಎ*)* ನನ್ನ ಸಹಿ. ನನ್ನ ಅಭಿಪ್ರಾಯದಂತೆ ಮರಣವು ತಲೆಗೆ ಆಗಿರುವ ಗಾಯದಿಂದ ಉಂಟಾಗಿರುತ್ತದೆ. ತನಿಖಾಧಿಕಾರಿಗಳ ಕೋರಿಯ ಮೇಲೆ ಮೃತನ ಮೈ ಮೇಲಿದ್ದ ವಸ್ತ್ರಗಳನ್ನು ಹಸ್ತಾಂತರಿಸುತ್ತೇನೆ. ನನ್ನ ಅಭಿಪ್ರಾಯದಂತ ಈ ಗಾಯಗಳು ಚೂಪಾದ ವಸ್ತುವಿನಿಂದ ಹಲ್ಲೆ ಮಾಡಿದ್ದಲ್ಲಿ ಉಂಟಾಗುವ ಸಾಧ್ಯತೆ ಇರುತ್ತದೆ . ಸದರಿ ಗಾಯಗಳು ಈಗ ನನಗೆ ತೋರಿಸಿದ ಮು.ಮಾ.*19* ಮತ್ತು *27* ರಿಂದ ಹಾಗೂ ಈಗ ನನಗೆ ತೋರಿಸಿದ್ದ ಕುಡುಗೋಲು ಮತ್ತು ಲೊಂಗ್ ನಿಂದ ಉಂಟಾಗಬಹುದಾದ ಸಾಧ್ಯತೆ ಇರುತ್ತದೆ. ಸದರಿ ಕುಡುಗೋಲು ಹಾಗೂ ಲೊಂಗ್ ಗಳನ್ನು ಮು.ಮಾ.*28* ಮತ್ತು *29* ಎಂದು ಗುರುತಿಸಲಾಯಿತು. ಮೃತನ ಬಟ್ಟೆಗಳನ್ನು ಸಾಕ್ಷಿ ಗುರುತಿಸಿದ್ದು ಮು.ಮಾ.*01* ರಿಂದ *4* ಎಂದು ಈಗಾಗಲೇ ಗುರುತಿಸಲಾಗಿದೆ. ಪೋಲಿಸರು ಆಯುಧಗಳನ್ನು ನನ್ನ ಮುಂದೆ ಹಾಜರು ಪಡಿಸಿರಲಿಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದ ಪಾಟೀ ಸವಾಲು</u>**

ಸಾಮಾನ್ಯವಾಗಿ ತನಿಖಾಧಿಕಾರಿಯವರು ಹತ್ಯೆಗೆ ಬಳಸಿದ್ದ ಆಯುಧವನ್ನು ನಮ್ಮ ಮುಂದೆ ಹಾಜರುಪಡಿಸಿ ಅಭಿಪ್ರಾಯ ಕೇಳುತ್ತಾರೆ ಎಂದರೆ ಸರಿ. ಆಯುಧಗಳನ್ನು ನನ್ನ ಮುಂದೆ ಹಾಜರುಪಡಿಸದ ಕಾರಣ ಇದೇ ಆಯುಧದಿಂದ ಹಲ್ಲೆ ಆಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ಮು.ಮಾ. 19, 27 ರಿಂದ 29 ರಿಂದ ನಾನು ಹೇಳಿದ ಗಾಯಗಳು ಆಗಿರುವುದಿಲ್ಲ ಎಂದರೆ ನನಗೆ ಹೇಳಲು ಆಗುವುದಿಲ್ಲ. ನಾನು ಹೇಳಿದ ಗಾಯಗಳನ್ನು ಮಾಡಿದ ಆಯುಧಗಳ ಮೇಲೆ ರಕ್ತದ ಕಲೆ ಇರುವ ಎಲ್ಲಾ ಸಾಧ್ಯತೆಗಳು ಇರುತ್ತವೆ ಎಂದರೆ ಸರಿ. ಅಂತಹ ಸಂದರ್ಭದಲ್ಲಿ ಮೃತನ ರಕ್ತದ ಮಾದರಿಗಳನ್ನು ಸಂಗ್ರಹಿಸಿ ಆಯುಧಗಳೊಂದಿಗೆ ಎಫ್.ಎಸ್.ಎಲ್ ಗೆ ಕಳುಹಿಸುತ್ತೇವೆ ಎಂದರೆ ಸರಿ. ಮು.ಮಾ.19, 27 ರಿಂದ 29 ರ ಮೇಲೆ ರಕ್ತದ ಕಲೆಗಳು ಇಲ್ಲದ ಕಾರಣ ಆ ಆಯುಧಗಳು ಈ ಕೇಸಿನಲಲ್ ಬಳಕೆ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ13.08.2025 **(ಕೆ.ಎಂ.ರಾಜಶೇಖರ)**

ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.